ಶ್ರೀ ಬಿ. ಸಿ. ನಂಜುಂಡಯ್ಯ.—ಇಷ್ಟರತನಕ ಎಷ್ಟು ಹಣ ಖರ್ಚಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಯವರೆಗೆ 1,23,000 ರೂಪಾಯಿಗಳು ಖರ್ಚಾಗಿವೆ ಎಂದು ನನ್ನ ಹತ್ತಿರ ಇರುವ information ನಿಂದ ಗೊತ್ತಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆಲಸ ನಿಲ್ಲಿಸಿ ಎಷ್ಟು ದಿವಸಗಳಾದವು?

Sri Kadidal MANJAPPA.—I want notice.

ಶ್ರೀ ಬಿ. ಸಿ. ನಂಜುಂಡಯ್ಯ.—ರಿವೈಸ್‌ಡ್ ಎಸ್ಟಿಮೇಟ್ಸ್ ಎಲ್ಲಿ scrutinise ಆಗುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—Superintending Engineer ಆಫೀಸಿನಲ್ಲಿ.

ಶ್ರೀ ಬಿ. ಸಿ. ನಂಜುಂಡಯ್ಯ.—ರಿವೈಸ್‌ಡ್ ಎಸ್ಟಿಮೇಟ್ ಎಷ್ಟಕ್ಕೆ ತಯಾರು ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—1,47,800 ರೂಪಾಯಿಗಳಿಗೆ.

ಶ್ರೀ ಬಿ. ಸಿ ನಂಜುಂಡಯ್ಯ.—ಒಂದು ಲಕ್ಷ 16 ಸಾವಿರ ರೂಪಾಯಿಗಳಲ್ಲದೆ, ಇನ್ನೂ 1,47,805 ರೂಪಾಯಿಗಳು ಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಎಲ್ಲಾ ಒಟ್ಟು ಎಸ್ಟಿಮೇಟ್ ಅಪ್ರಾವಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಇನ್ನು 30,000 ರೂಪಾಯಿಗಳು ಜಾಸ್ತಿಆಗುತ್ತವೆ. ಈ ಕೆಲಸ ಯಾವಾಗ ಮುಗಿಸುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಜಾಗ್ರತೆ ಮುಗಿಸಬೇಕೆಂದು ಸೂಚನೆ ಕೊಡಲಾಗಿದೆ.

Highway from Davanagere to Arsikere

Q.—434. Sm. Bellary SIDDAMMA (Davanagere).—

Will the Government be pleased to state :—

(*a*) whether they intend to form a highway from Davanagere to Arsikere *via* Maganahalli and Hiremegalgere :

(*b*) whether it has come to their notice that this will facilitate trade and will be of convenience to the public ;

(*c*) if so, the action taken ?

A.—Sri Kadidal MANJAPPA (Minister for Revenue and Public Works).—

(*a*) No.

(*b*) No.

(*c*) Does not arise.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ಈ ರಸ್ತೆಯಲ್ಲಿ ಅನೇಕ ಬಸ್ಸುಗಳು, ಗಾಡಿಗಳು ಮತ್ತು ಲಾರಿಗಳು ಮುಂತಾದುವು ಓಡಾಡಿ ವ್ಯಾಪಾರ ಸ್ಥಳಗಳನ್ನು ನಿಂದಿಸುತ್ತವೆ ಎಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆ ರಸ್ತೆಯಲ್ಲಿ ಯಾವಾಗಲೂ ಹೋಗಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ಈ ವರ್ಷ ಈ ರಸ್ತೆಯನ್ನು ಮಾಡಿಸಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ನಿರ್ಧರವಾಗಿ ತಮಗೆ ಜವಾಬು ಕೊಡಲು ಸಿದ್ಧನಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇನೆ.

Road from Bangalore to Chintamani (tarring).

Q.—580. Sri M. C. ANJANEYA REDDY (Chintamani).—

Will the Government be pleased to state :—

whether they have thought of tarring the road which runs from Bangalore to Chintamani ?

A.—Sri Kadidal MANJAPPA (Minister for Revenue and Public Works).—

Some portions have already been tarred, and proposals for tarring some more portions are received.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಪ್ರಶ್ನೆಯ ಉತ್ತರದಲ್ಲಿ ರಸ್ತೆಯ ಕೆಲವು ಭಾಗಗಳಿಗೆ ಈಗಾಗಲೇ ತಾರು ಹಾಕಲಾಗಿದೆ ಎಂದು ಹೇಳಿದ್ದೀರಿ. ಹೊಸ ಕೋಟೆಯಿಂದ ಚಿಂತಾಮಣಿಗೆ 30 ಮೈಲಿ ದೂರವಿದೆ. ಇದರಲ್ಲಿ ಎಷ್ಟು ಭಾಗಕ್ಕೆ ತಾರು ಹಾಕಿ ಮುಗಿಸಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟು ಮೈಲಿ ಆಗಿದೆ ಇಷ್ಟು ಮೈಲಿ ಆಗಿಲ್ಲವೆಂಬ ವಿವರಗಳನ್ನು ಕೊಡುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಎರಡು ವರ್ಷಗಳಿಂದಲೂ 22 furlongs ಹಾಕಿದ್ದೀರಿ. ವರ್ಷಕ್ಕೆ ಎಷ್ಟು furlongs ತಾರು ಹಾಕುವುದಕ್ಕೆ ನಿಮ್ಮ ಡಿಪಾರ್ಟ್‌ಮೆಂಟಿನಿಂದ ಸಾಧ್ಯವಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ದುಡ್ಡು ಇದ್ದರೆ ಎಲ್ಲಾ furlongs ಗಳಿಗೂ ಒಂದೇ ಸಾರಿ ತಾರ್ ಹಾಕಿಸುವುದಕ್ಕೆ ಅಥವಾ ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಸದಸ್ಯರು 20 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಎಲ್ಲಾ ರಸ್ತೆಗಳನ್ನೂ ಸಿಮೆಂಟ್ ಕಾಂಕ್ರೀಟ್ ಮಾಡಿಸುತ್ತೇವೆ.

Bhadra River at Anveri (Construction of Steps.)

Q.—82. Sri B. MADHAVACHAR (Bhadravati).—

Will the Government be pleased to state :—

(*a*) the population of Anveri Village, Bhadravati Taluk :

(*b*) the number of wells used for drinking water in the village :